Sri N. B. SIRDESAI.—May I know the amount sanctioned for repairs work of Jamboti-Kankumbi Road in 1967-68 ?

Sri K. LAKKAPPA.—It is mentioned in the answer. For the entire length of this road the estimated cost would be about 13.40 lakhs rupees. We have taken up a particular length to the Public Works Department and getting it repaired. We are not able to spend the entire amount in one or two years and therefor we will do it on a phased programme.

ಅಧ್ಯಕ್ಷರು.—ಪಶ್ನೆ 25 ಮತ್ತು 28. ಮಾನ್ಯಸದಸ್ಯರು ಸಭೆಯಲ್ಲಿ ಹಾಜರಿಲ್ಲ. ಪ್ರಶ್ನೆ 37.

Construction of Bridge near Jaldurg Island

37. Sri K. SANGAN GOWDA (Lingsugur).—

Will the Minister for Public Works be pleased to state :—

(*a*) whether any survey has been conducted in connection with the construction of a bridge across the branch of river Krishna near Jaldurg Island to connect the said Island with the rest of Lingsugur Taluk;

(*b*) if so, the estimated cost of the same;

(*c*) when the work of the said bridge is expected to be commenced ?

Sri K. LAKKAPPA (Minister for Public Works).—

(*a*) No.

(*b*) and (*c*) Does not arise in view of reply to clause (*a*) above.

ಶ್ರೀ ಕೆ. ನಂಗನಗೌಡ.—1947 ರಿಂದ ನಾವು ಆ ಜಲದುರ್ಗ ಐಲೆಂಡಿಗೆ ಒಂದು ಸೇತುವೆ ಯಾಗಬೇಕೆಂದು ಒತ್ತಾಯ ಮಾಡುತ್ತಿದ್ದರೂ ಅದಕ್ಕೆ ಸರ್ಕಾರದವರು ಗಮನಕೊಡುತ್ತಿಲ್ಲ. ಆ ದ್ವೀಪದಲ್ಲಿ ನುಮಾರು ಎರಡುನಾವಿರ ಜನಸಂಖ್ಯೆ ಇದೆ. ಅಲ್ಲಿ ಐದು ಹಳ್ಳಿಗಳಿವೆ. ಅಲ್ಲಿ ಹತ್ತು ನಾವಿರ ಎಕರೆ ಫಲವತ್ತಾದ ಭೂಮಿ ಇದೆ. ಅಲ್ಲಿ ನೂರಾರು ಕ್ವೆಮುಗಳು ನತೆಯುತ್ತಿವೆ. ಅವುಗಳು ಒಂದೂ ಡಿಟೆಕ್ಟ್ ಆಗುತ್ತಿಲ್ಲ. ಇಷ್ಟೆರಾ ಅನಾನುಕೂಲ ಇರುವುದರಿಂದ ಅಲ್ಲಿಗೆ ಒಂದು ಸೇತುವೆ ಹಾಕುವುದಕ್ಕೆ ಈಗರಾದರೂ ಪ್ರಯತ್ನಮಾಡುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ಅಲ್ಲಿಗೆ ಒಂದು ಸರ್ವೆಜರ್ಸ್ ಬ್ರಿಡ್ಜ್‌ನ್ನು ಹಾಕಲು 4 ಲಕ್ಷ ರೂಪಾಯಿ ಖರ್ಚಾಗುತ್ತದೆ. ಅಲ್ಲಿ 5 ಹಳ್ಳಿಗಳು ಮಾತ್ರ ಇರುತ್ತವೆಂದು ಹೇಳುತ್ತಿದ್ದಾರೆ. ಹಣದ ಪರಿಸ್ಥಿತಿ ಅಷ್ಟು ಚೆನ್ನಾಗಿಲ್ಲ. ಹಣದ ಪರಿಸ್ಥಿತಿ ಉತ್ತಮಗೊಂಡಾಗ ಅಲ್ಲಿಗೂ ಅನುಕೂಲ ಮಾಡೋಣ.

ಶ್ರೀ ಎನ್. ಎಂ. ಗುರೆಡ್ಡಿ.—ಅಲ್ಲಿಗೆ ಸೇತುವೆ ಹಾಕುವುದಕ್ಕೆ ಸಾಧ್ಯವಿಲ್ಲದಪಕ್ಷಕ್ಕೆ ಆ ಹಳ್ಳಿಗಳನ್ನೇ ಬೇರೆ ಕಡೆಗೆ ವರ್ಗಾಯಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ಅಲ್ಲಿ ಅವರು ನೂರಾರು ವರ್ಷಗಳಿಂದ ಇದ್ದುಕೊಂಡು ಅಲ್ಲಿ ಆಸ್ತಿ ಪಾಸ್ತಿಗಳನ್ನು ಮಾಡಿದ್ದಾರೆ. ಅವರನ್ನು ಬೇರೆ ಕಡೆಗೆ ಅಷ್ಟು ಸುಲಭವಾಗಿ ವರ್ಗಾಯಿಸುವು ದಕ್ಕಾಗುವುದಿಲ್ಲ. ಹಣದ ಅನುಕೂಲತೆ ನೋಡಿಕೊಂಡು ಅವರಿಗೂ ಅನುಕೂಲಮಾಡೋಣ.

ಶ್ರೀ ಎಂ. ನಾಗಪ್ಪ.—ನರಕಾರದವರಿಗೆ 4 ಲಕ್ಷ ರೂಪಾಯಿಗಳು ಹೆಚ್ಚೋ ಅಥವಾ ಅಲ್ಲಿ ಇರತಕ್ಕ 5 ಹಳ್ಳಿಯ ಜನರ ಯೋಗಕ್ಷೇಮ ಹೆಚ್ಚೋ ! ಅಲ್ಲದೆ ಅಲ್ಲಿಗೆ ಸೇತುವೆ ಕಟ್ಟಲು ಅಂದಾಜ ತಯಾರಾಗಿಲ್ಲ ಎಂದು ಹೇಳುತ್ತಿರುವಾಗ ತಾವು ಅಲ್ಲಿಗೆ 4 ಲಕ್ಷ ರೂಪಾಯಿಗಳು ಬೇಕೆಂದು ಹೇಗೆ ಹೇಳುತ್ತೀರಿ ? ಈ ಎರಡರಲ್ಲಿ ಯಾವುದು ನಿಜ ?

ಶ್ರೀ ಕೆ. ಲಕ್ಕಪ್ಪ.—ಅಲ್ಲಿರತಕ್ಕವರಿಗೆ ಆಗತಕ್ಕ ಅನಾನುಕೂಲವನ್ನು ಪರಿಹಾರಮಾಡತಕ್ಕದ್ದು ಸರ್ಕಾರದವರ ಕರ್ತವ್ಯ. ಹಣದ ಅನುಕೂಲತೆ ನೋಡಿಕೊಂಡು ಕೆಲಸಮಾಡೋಣ.

ಶ್ರೀ ಎಂ. ನಾಗಪ್ಪ.—ಈ ಕಾಮಗಾರಿಗಾಗಿ ಅಂದಾಜು ಮಾಡಿದ್ದೀರಾ ಅಂದರೆ ಅದಕ್ಕೆ ಇಲ್ಲವೆಂದು ಹೇಳಿದ್ದೀರಿ. ಈಗ ತಾವು ಹೇಳುತ್ತೀರಿ 4 ಲಕ್ಷ ರೂಪಾಯಿಗಳು ಖರ್ಚಾಗುತ್ತದೆಂದು. ಇದರಲ್ಲಿ ಯಾವುದು ಸತ್ಯ ?

ಶ್ರೀ ಕೆ. ಲಕ್ಕಪ್ಪ.—ಅದನ್ನು ನರಿಯಾಗಿ ಅಂದಾಜು ಮಾಡಿಲ್ಲ. ಕಣ್ಣು ಅಂದಾಜಿನ ಮೇಲೆ ಇಷ್ಟಾಗುತ್ತದೆಂದು ಅದರ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದಾರೆ. ಅದನ್ನು ಇಲ್ಲಿ ಹೇಳಿದೆ.

Sri RAJA PID NAIK.—Is it not a fact that the village of Jaladurga, being an island, is cut off from the rest of the taluk and also Sholapur taluk for nearly 7 to 8 months during the floods and if so, what action the Government propose to take ?

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಅಕ್ಷರಶಃ ಒಪ್ಪುತ್ತೇನೆ. ಬಹಳ ವರ್ಷಗಳಿಂದ ಹಾಗೆಯೇ ಬಂದಿದ್ದಾರೆ. ಇನ್ನೂ ಸ್ವಲ್ಪ ವರ್ಷಗಳ ಕಾಲ ಅವರು ಕಾಯಬೇಕಾಗುತ್ತದೆ.

ಶ್ರೀ ಎಂ. ನಾಗಪ್ಪ.—ಅಂದಾಜು ಇನ್ನೆಷ್ಟು ವರ್ಷಗಳು ಕಾಯಬೇಕು ?

ಶ್ರೀ ಕೆ. ಲಕ್ಕಪ್ಪ.—ಈಗಲೇ ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಶರಣಗೌಡ ಇನಾಂದಾರ್.—ಸ್ವಲ್ಪ ದಿವಸಗಳ ಕೆಳಗೆ ಕೊಯಿನಾ ಪ್ರಾಜೆಕ್ಟ್ ಒಡೆಯುತ್ತದೆಂದು ಹೇಳಿದಾಗ ಮೇಲಿಂದಮೇಲೆ ರಾಜ್ಯಸರ್ಕಾರ ವಿಚಾರಮಾಡುತ್ತಿದ್ದರು. ನವಂಬರ್ ತಿಂಗಳೊಳಗೆ ಡಿವಿಜನರ್ ಕಮಿಷನರ್ ಬಂದಾಗ ಸುಮಾರು 2 ಸಾವಿರ ಜನರು ಕೊಯಿನಾ ಪ್ರಾಜೆಕ್ಟ್ ಒಡೆದುಹೋಗಿ ಕೊಚ್ಚಿಕೊಂಡು ಹೋಗುವ ಪರಿಸ್ಥಿತಿ ಇದೆಯೆಂದು ಯಾರಾದರೂ ಈ ಸರ್ಕಾರದ ಗಮನಕ್ಕೆ ತಂದಿದ್ದಾರೆಯೇ ?

ಶ್ರೀ ಕೆ. ಲಕ್ಕಪ್ಪ.—ಕೊಯಿನಾ ಪ್ರಾಜೆಕ್ಟ್ ಒಡೆಯುವ ಭಯವಿಲ್ಲ, ಈಗಿರುವ ಪ್ರಶ್ನೆ ಷಿಫ್ಟ್ ಮಾಡುವ ಪ್ರಶ್ನೆ ಆದ್ದರಿಂದ ಬ್ರೆಡ್ತ್ ಹಾಕುವ ಪ್ರಶ್ನೆ ಬರುವುದಿಲ್ಲ.

ಶ್ರೀ ಎ. ಎನ್. ಪಾಟೀಲ್.—ಷಿಫ್ಟ್‌ಮಾಡಿದರೆ ಸರ್ಕಾರದವರು ಅದಕ್ಕೆಯಿಡ್ಡು ಕೊಡುತ್ತಾರೋ ಇಲ್ಲವೋ ?

ಶ್ರೀ ಕೆ. ಲಕ್ಕಪ್ಪ.—ಮುಖ್ಯ ಮಂತ್ರಿಗಳು ಈಗಾಗಲೇ ಹೇಳಿದ್ದಾರೆ. ಮುಂದೆ ಇದರಿಂದ ಅಪಾಯವಾಗುವ ಪರಿಸ್ಥಿತಿ ಅಷ್ಟಾಗಿ ಇಲ್ಲ ಎಂದು ವರದಿ ಅದರ ಬಗ್ಗೆ ಬಂದಿದೆ ಆದ್ದರಿಂದ ಅಪಾಯ ಬರುವ ಪರಿಸ್ಥಿತಿ ಕಾಣಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಕೊಯಿನಾ ಅಣೆಕಟ್ಟು ಒಡೆದುಹೋಗುತ್ತದೆಂಬ ಭೀತಿ ಇರುವುದರಿಂದ ಒಂದುವೇಳೆ ಸಂಪರ್ಕ ಒದಗಿಸಿದರೂ ಅದು ಕೊಚ್ಚಿಕೊಂಡು ಹೋಗುತ್ತದೆ. ಆಗ ರಾಜ್ಯ ಸರ್ಕಾರಕ್ಕೆ ನಷ್ಟವಾಗುತ್ತದೆ ಅದಕ್ಕಾಗಿ ಟ್ರಾನ್ಸ್‌ಪೋರ್ಟ್ ಅನುಕೂಲ ಮಾಡಿಕೊಡುವುದಕ್ಕೆ ನೀವು ತಯಾರಾಗಿಲ್ಲವೆಂದು ಹೇಳಿದ್ದು ನಿಜವೇ ?

ಶ್ರೀ ಕೆ. ಲಕ್ಕಪ್ಪ.—ಅದು ಕೊಚ್ಚಿಕೊಂಡು ಹೋಗುವ ಪರಿಸ್ಥಿತಿ ನಮಗೆ ಎದ್ದು ಕಾಣುತ್ತಾ ಇಲ್ಲ. ಹಣಕಾಸಿನ ಪರಿಸ್ಥಿತಿ ಉತ್ತಮವಾದಾಗ, ಇದನ್ನು ಯೋಜನೆ ಮಾಡಬೇಕಾಗುತ್ತದೆ.

Non-posting of Doctors at M.I.S.L. Hospital, Bhadravathi

48. Sri ABDUL KHUDDUS ANWAR (Bhadravathi).—

Will the Minister for Health be pleased to State :—

(*a*) whether it is a fact that doctors are not posted to M. I. S. L. Hospital in Bhadravathi although vacancies are there since last 5 years ;